ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) 295-37 ಎಕರೆ ಸರ್ಕಾರಿ ಹಾಗೂ 128-03 ಎಕರೆ ಖಾಸಗಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಅಳವಡಿಸಲು ಉದ್ದೇಶಿಸಿದೆ. 128-03 ಎಕರೆ ಖಾಸಗಿ ಜಮೀನು ಸ್ವಾಧೀನಕ್ಕೊಳಪಡಿಸಿ, ಪರಿಹಾರಧನವನ್ನು ನೀಡಲಾಗಿದೆ.

ಬಗರ್ ಹುಕುಂ ಸಾಗುವಳಿಗಾರರಿಗೆ ಎಕರೆ ಒಂದಕ್ಕೆ ರೂ. 25,000-00 ಗಳಂತೆ ಎಕ್ಸ್‌ಗ್ರೇಷಿಯಾ ರೂಪದಲ್ಲಿ ಪರಿಹಾರ ನೀಡಲು ತೀರ್ಮಾನಿಸಲಾಗಿದೆ.

ಶಿವಮೊಗ್ಗದ ದೇವಿ ಶುಗರ್ ವರ್ಕ್ಸ್‌ನ ಪುನರಾಂಭದ ಬಗ್ಗೆ

1573 (1405) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಶಿವಮೊಗ್ಗ ಸಮೀಪವಿರುವ ಶ್ರೀ ದೇವಿ ಸಕ್ಕರೆ ಕಾರ್ಖಾನೆ ಪುನರ್ ಆರಂಭದ ಬಗ್ಗೆ ಸರ್ಕಾರದ ಈವರೆಗೆ ಯಾವ ಕ್ರಮ ಕೈಗೊಂಡಿರುತ್ತದೆ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆಯಿಂದ ಬರಬೇಕಾದ ಬಾಕಿಗಾಗಿ ಚೆನ್ನೈ ಹೈಕೋರ್ಟ್‌ನಲ್ಲಿ ದಾವಾ ಹೂಡಿದ್ದರಿಂದ ಚೆನ್ನೈ ಹೈ-ಕೋರ್ಟ್ ಸದರಿ ಕಾರ್ಖಾನೆಯನ್ನು ಸಮಾಪನೆಗೊಳಿಸಲು ಹಾಗೂ ಸಮಸ್ತ ವಹಿವಾಟನ್ನು ಚೆನ್ನೈ ಹೈ ಕೋರ್ಟ್‌ನಿಂದ ನೇಮಕವಾದ ಅಫಿಷಿಯಲ್ ಲಿಕ್ವಿಡೇಟರ್ ರವರ ವಶಕ್ಕೆ ನೀಡುವ ಆದೇಸ ಹೊರಡಿಸಿದ್ದರ ಮೇರೆಗೆ ಕಾರ್ಖಾನೆಯನ್ನು ಅಫಿಷಿಯಲ್ ಲಿಕ್ವಿಡೇಟರ್ ಅವರು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ಮೆ: ದೇವಿ ಶುಗರ್ಸ್ ಕಾರ್ಖಾನೆಯು ಖಾಸಗಿ ಕ್ಷೇತ್ರದ ಕಾರ್ಖಾನೆಯಾಗಿದ್ದು, ಸದರಿ ಕಾರ್ಖಾನೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಈ ಹಿಂದೆ ಯೋಚಿಸಿದ ಪ್ರಸ್ತಾವೆಯನ್ನು ಮೇಲಿನ ಕಾರಣಕ್ಕಾಗಿ ಕೈ ಬಿಡಲಾಗಿದೆ. ಕಾರಣ ಪುನಃ ಕಾರ್ಖಾನೆ ಪ್ರಾರಂಭಿಸುವ ಪ್ರಶ್ನೆ ಇರುವುದಿಲ್ಲ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಲೆಕ್ಕಪತ್ರದ ಬಗ್ಗೆ

1574 (2047) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಸಂಸ್ಥೆಯಾದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿನ ಲೆಕ್ಕಪತ್ರಗಳನ್ನು ಮಹಾಲೇಖಪಾಲರಿಂದ ಅಥವಾ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ತನಿಖೆ ಮಾಡಿಸಲಾಗಿದೆಯೇ?

ಆ) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗ ಇದೆಯೆ;

ಇ) ಇಲ್ಲಿಯವರೆವಿಗೂ ಲೆಕ್ಕಪತ್ರ ಆಡಿಟ್ ಮಾಡಿಸದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ;

ಈ) ತಿಳಿದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್. ರೋಷನ್‌ಬೇಗ್ (ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಇಲ್ಲ.